**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:170ಕ್ಕೆ ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಉತ್ತರ:**

**ಪ್ರಶ್ನೆ:**

ದಿನಾಂಕ:07.04.2021 ರಿಂದ 21.04.2021 ರವರೆಗೆ ವೇತನ ಪರಿಷ್ಕರಣೆಗಾಗಿ ನಡೆದ ಮುಷ್ಕರದಲ್ಲಿ ಪಾಲ್ಗೊಂಡ ಕರ್ನಾಟಕ ರಾಜ್ಯದ ನಾಲ್ಕು ಸಾರಿಗೆ ನಿಗಮಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳ ಖಾಯಂ, ಪರೀಕ್ಷಣಾರ್ಥಿ ಮತ್ತು ತರಬೇತಿ ನೌಕರರನ್ನು ವಜಾ ಮಾಡಲಾಗಿದ್ದು, ಸದರಿ ನೌಕರರನ್ನು ಮರುನೇಮಕಗೊಳಿಸಲು ಕುರಿತು ನಿಯಮ-72ರಲ್ಲಿ ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

**ಕ.ರಾ.ರ.ಸಾ.ನಿಗಮ**

ಯಾವುದೇ ನೌಕರರನ್ನು ಮುಷ್ಕರದ ಕಾರಣದಿಂದ ವಜಾಗೊಳಿಸಿರುವುದಿಲ್ಲ. ಮುಷ್ಕರದ ಅವಧಿಯಲ್ಲಿ ಅನ್ಯ ಕಾರಣಗಳ ಮೇಲೆ ದಾಖಲಾಗಿದ್ದ ಶಿಸ್ತು ಪ್ರಕರಣಗಳಲ್ಲಿ ಒಟ್ಟು 74 ಸಿಬ್ಬಂದಿಗಳನ್ನು ವಜಾಗೊಳಿಸಿದ್ದು, ವಜಾಗೊಂಡ ಸಿಬ್ಬಂದಿಗಳು ವಜಾ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಪ್ರಾಧಿಕಾರಸ್ಥರಿಗೆ/ ಸ್ವಯಂ ಪರಿಶೀಲನಾ ಪ್ರಾಧಿಕಾರಸ್ಥರಿಗೆ ಮೇಲ್ಮನವಿ/ ಅರ್ಜಿಗಳನ್ನು ಸಲ್ಲಿಸಿದ ಪ್ರಕರಣಗಳಲ್ಲಿ ನಿಯಮಾವಳಿಗಳನ್ವಯ ಮತ್ತು ಪ್ರಕರಣಗಳ ಅರ್ಹತೆಯ ಆಧಾರದ ಮೇಲೆ (on merits of the case) ಅರ್ಹ ಪ್ರಕರಣಗಳಲ್ಲಿ ಈಗಾಗಲೇ 11 ಸಿಬ್ಬಂದಿಗಳನ್ನು ಪುನರ್ ನೇಮಕ ಮಾಡಲಾಗಿದೆ.

ಮುಷ್ಕರದಲ್ಲಿ ಪಾಲ್ಗೊಂಡ 324 ತರಬೇತಿ ನೌಕರರನ್ನು ಆಯ್ಕೆ ಪಟ್ಟಿಯಿಂದ ತೆಗೆದು ಹಾಕಲಾಗಿದ್ದು, ಅವರುಗಳ ಪೈಕಿ 276 ನೌಕರರು ಮೇಲ್ಮನವಿಯನ್ನು ಸಲ್ಲಿಸಿದ್ದು, 266 ನೌಕರರನ್ನು ಪುನರ್ ನೇಮಕಗೊಳಿಸಲಾಗಿದೆ. (ದಯಾಯಾಚನಾ ಮನವಿ ಮೂಲಕ 152 ಮತ್ತು ಲೋಕ ಅದಾಲತ್ ಮೂಲಕ 114) ಉಳಿದ 10 ನೌಕರರ ಮೇಲ್ಮನವಿಯನ್ನು ತಿರಸ್ಕರಿಸಿದ್ದು, ಸದರಿ ತರಬೇತಿ ನೌಕರರು ಯಾವುದೇ ರೀತಿಯ ಪುನರ್ ಪರಿಶೀಲನಾ ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ. ಉಳಿದ 48 ನೌಕರರು ಯಾವುದೇ ಮೇಲ್ಮನವಿಗಳನ್ನು ಸಲ್ಲಿಸದೇ ಇರುವುದರಿಂದ ಅಂತಹ ನೌಕರರುಗಳನ್ನು ಪುನರ್ ನೇಮಕ ಮಾಡಿರುವುದಿಲ್ಲ.

**ಬೆಂ.ಮ.ಸಾ.ಸಂಸ್ಥೆ**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ(ರಿ), ಗಾಂಧಿನಗರ, ಬೆಂಗಳೂರು ರವರು ದಿನಾಂಕ:06.04.2021 ರಿಂದ 21.04.2021 ರವರೆಗೆ ಹಮ್ಮಿಕೊಂಡಿದ್ದ ಮುಷ್ಕರದ ಹಿನ್ನೆಲೆಯಲ್ಲಿ ಒಟ್ಟು 1354 ನೌಕರರುಗಳನ್ನು ಸಂಸ್ಥೆಯ ಸೇವೆಯಿಂದ ವಜಾಗೊಳಿಸಲಾಗಿದೆ ಹಾಗೂ ಉಳಿದ ನೌಕರರುಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ನಡತೆ & ಶಿಸ್ತು) ನಿಯಮಾವಳಿ 1971 ರನ್ವಯ ಶಿಕ್ಷೆಗಳನ್ನು ವಿಧಿಸಲಾಗಿದೆ.

ಸಂಸ್ಥೆಯು ಮುಷ್ಕರದ ಸಮಯದಲ್ಲಿ ವಜಾಗೊಂಡ ನೌಕರರುಗಳಿಗೆ ಲೋಕ್-ಅದಾಲತ್ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ.

ಸೇವೆಯಿಂದ ವಜಾಗೊಳಿಸಲಾದ 1354 ನೌಕರರಲ್ಲಿ ಲೋಕ್ ಅದಾಲತ್ ಮೂಲಕ 707 ನೌಕರರನ್ನು ಪುನರ್‌ನೇಮಕ ಮಾಡಲಾಗಿದೆ. 554 ಪ್ರಕರಣಗಳು ಕಾರ್ಮಿಕ ನ್ಯಾಯಾಲಯದಲ್ಲಿ ಬಾಕಿ ಉಳಿದಿರುತ್ತವೆ. ಉಳಿದಂತೆ 93 ನೌಕರರು ಪುನರ್ ನೇಮಕ ಕೋರಿ ಕಾರ್ಮಿಕ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಿರುವುದಿಲ್ಲ.

ಮುಷ್ಕರದ ಸಮಯದಲ್ಲಿ ನೌಕರರನ್ನು ವಜಾಗೊಳಿಸಿರುವ ಪ್ರಕರಣಗಳನ್ನು ರದ್ದುಪಡಿಸುವ ಪ್ರಸ್ತಾವನೆ ಸಂಸ್ಥೆಯ ಮುಂದಿರುವುದಿಲ್ಲ.

**ವಾ.ಕ.ರ.ಸಾ.ಸಂಸ್ಥೆ**

ವಾ.ಕ.ರ.ಸಾ.ಸಂಸ್ಥೆಗೆ ಸಂಬಂಧಿಸಿದಂತೆ ಮುಷ್ಕರದ ಅವಧಿಯಲ್ಲಿ ಅನಧಿಕೃತ ಗೈರು ಹಾಜರಾಗಿ ಮುಷ್ಕರದಲ್ಲಿ ಭಾಗವಹಿಸಿ ಸಂಸ್ಥೆಯ ನೌಕರನಲ್ಲದ ರೀತಿಯಲ್ಲಿ ವರ್ತಿಸಿ ತರಬೇತಿ ಹಾಗೂ ಪರೀಕ್ಷಾರ್ಥ ಸೇವೆಯ ಮೇಲೆ ನಿಯೋಜಿಸಿದ ಆದೇಶ ಉಲ್ಲಂಘನೆ ಮತ್ತು ಸಂಸ್ಥೆಯ ಘನತೆಗೆ ಧಕ್ಕೆ ಉಂಟು ಮಾಡಿರುವ ಹಿನ್ನೆಲೆಯಲ್ಲಿ, ಸಂಸ್ಥೆಯಲ್ಲಿ ಒಟ್ಟು 336 ಸಿಬ್ಬಂದಿಗಳನ್ನು ವಜಾ, ಸೇವೆಯಿಂದ ಬಿಡುಗಡೆ ಹಾಗೂ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಮುಂದುವರೆದಂತೆ, ಈ ರೀತಿಯಲ್ಲಿ ವಜಾ, ಸೇವೆಯಿಂದ ಬಿಡುಗಡೆ ಹಾಗೂ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾದ ಸಿಬ್ಬಂದಿಗಳಲ್ಲಿ 308 ಸಿಬ್ಬಂದಿಗಳು ಮೇಲ್ಮನವಿ ಸಲ್ಲಿಸಿದ್ದು, ಇದರಲ್ಲಿ 290 ಮೇಲ್ಮನವಿ ಪ್ರಕರಣಗಳಲ್ಲಿ ನಿಯಮಾವಳಿಗಳನ್ವಯ ಮತ್ತು ಪ್ರಕರಣದ ಅರ್ಹತೆಯ ಆಧಾರದ ಮೇಲೆ (on merits of the case) ಈಗಾಗಲೇ ಸದರಿ ಸಿಬ್ಬಂದಿಗಳನ್ನು ಸೇವೆಯಲ್ಲಿ ಮರುನೇಮಕಗೊಳಿಸಲಾಗಿದೆ. ಪ್ರತಿಭಟನೆಯಲ್ಲಿ ಪಾಲ್ಗೊಂಡು, ಕರ್ತವ್ಯ ನಿರತ ಚಾಲಕನ ಸಾವಿಗೆ ಕಾರಣರಾಗಿರುವ ಬಾಗಲಕೋಟೆ ವಿಭಾಗದ ಒಟ್ಟು 07 ಸಿಬ್ಬಂದಿಗಳನ್ನು ಹಾಗೂ ಅನ್ಯ ಕಾರಣಗಳ ಈ ಹಿಂದಿನ ಪ್ರಕರಣಗಳಲ್ಲಿ ವಿಚಾರಣೆ ಕೈಗೊಂಡು ವಜಾಗೊಳಿಸಿದ ಸಿಬ್ಬಂದಿಗಳಿಗೆ ಸಂಬಂಧಿಸಿದ ಮೇಲ್ಮನವಿಗಳನ್ನು ಪ್ರಕರಣದ ಗಂಭೀರತೆಯನುಸಾರ ಪರಿಗಣಿಸಿರುವುದಿಲ್ಲ.

**ಕ.ಕ.ರ.ಸಾ.ನಿಗಮ**

ಕ.ಕ.ರ.ಸಾ.ನಿಗಮಕ್ಕೆ ಸಂಬಂಧಪಟ್ಟಂತೆ, ಮುಷ್ಕರದ ಸಂದರ್ಭದಲ್ಲಿ ಅನ್ಯ ಕಾರಣಗಳ ಮೇಲ 81 ಖಾಯಂ/ ತರಬೇತಿ ನೌಕರರನ್ನು ಸೇವೆಯಿಂದ ವಜಾ/ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಅವರುಗಳ ಪೈಕಿ 13 ಜನ ನೌಕರರನ್ನು ಮೇಲ್ಮನವಿ ಪ್ರಾಧಿಕಾರಿಗಳು ಪರಿಗಣಿಸಿ, ಸೇವೆಗೆ ಮರುನೇಮಕ ಮಾಡಲಾಗಿರುತ್ತದೆ. 47 ಜನ ನೌಕರರ ಮನವಿಯನ್ನು ತಿರಸ್ಕರಿಸಲಾಗಿದೆ. 21 ಜನ ನೌಕರರು ವಜಾ/ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ/ದಯಾಯಾಚನಾ ಮನವಿಯನ್ನು ಈವರೆಗೂ ಸಲ್ಲಿಸಿರುವುದಿಲ್ಲ.

ಮುಷ್ಕರದ ಅವಧಿಯಲ್ಲಿ ಸೇವೆಯಿಂದ ವಜಾ/ತೆಗೆದುಹಾಕಲಾದ ನೌಕರರ ಪೈಕಿ 34 ಜನ ನೌಕರರು ವಜಾ ಆದೇಶವನ್ನು ಪ್ರಶ್ನಿಸಿ ಕಾರ್ಮಿಕ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಸದರಿ ನೌಕರರನ್ನು ಲೋಕ್ ಅದಾಲತನಲ್ಲಿ ರಾಜಿ ಸಂಧಾನದ ಮೂಲಕ ಸದರಿ ನೌಕರರನ್ನು ಸೇವೆಯಲ್ಲಿ ಪುನರ್ ನೇಮಕ ಮಾಡಿಕೊಳ್ಳುವ ಕುರಿತು ಪರಿಶೀಲಿಸಲು ವ್ಯವಸ್ಥಾಪಕ ನಿರ್ದೇಶಕರವರ ಅಧ್ಯಕ್ಷತೆಯಲ್ಲಿ ಇಲಾಖಾ ಮುಖ್ಯಸ್ಥರ ಸಮಿತಿ ರಚಿಸಿದ್ದು, ಸದರಿ ಸಮಿತಿಯು ಸಭೆ ಸೇರಿ ಪರಿಶೀಲಿಸಿ ಒಟ್ಟು 20 ಪ್ರಕರಣಗಳನ್ನು ಲೋಕ್ ಅದಾಲತನಲ್ಲಿ ಈಗಾಗಲೇ ರಾಜಿ ಸಂಧಾನದ ಮೂಲಕ ಇತ್ಯರ್ಥ ಪಡಿಸಲಾಗಿರುತ್ತದೆ. ಬಾಕಿ ಇರುವ 14 ಪ್ರಕರಣಗಳು ಅತ್ಯಂತ ಗಂಭೀರ ಸ್ವರುಪದ ಪ್ರಕರಣಗಳಾಗಿದ್ದು, ಲೋಕ್ ಅದಾಲತನಲ್ಲಿ ಇತ್ಯರ್ಥಪಡಿಸಲಾಗಿರುವುದಿಲ್ಲ.

ಸಂಖ್ಯೆ: ಟಿಡಿ 358 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು.